# ಕರ್ನಾಟಕ ವಿಧಾನ ಸಭೆ
## ಹದಿನಾಲ್ಕನೇ ವಿಧಾನ ಸಭೆ
## ಹದಿಮೂರನೇ ಅಧಿವೇಶನ
## (ಮುಂದುವರೆದ ಉಪವೇಶನ)

## ಕರ್ನಾಟಕ ಶಿಕ್ಷಣ (ಎರಡನೇ ತಿದ್ದುಪಡಿ) ವಿಧೇಯಕ, 2017
## (2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-18)

ಕರ್ನಾಟಕ ಶಿಕ್ಷಣ ಅಧಿನಿಯಮ, 1983ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಶಿಕ್ಷಣ ಅಧಿನಿಯಮ, 1983ನ್ನು (1995ರ ಕರ್ನಾಟಕ ಅಧಿನಿಯಮ 1) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಶಿಕ್ಷಣ (ಎರಡನೇ ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 1ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ (1995ರ ಕರ್ನಾಟಕ ಅಧಿನಿಯಮ 1) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 1ನೇ ಪ್ರಕರಣದ (3)ನೇ ಉಪಪ್ರಕರಣದ (iiiಎ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(iiiಎ) ಈ ಅಧಿನಿಯಮದ 5ಎ, 48, 112ಎ ಮತ್ತು 124ಎ ಪ್ರಕರಣಗಳ ಉಪಬಂಧಗಳ ಅನ್ವಯಿಕೆಯನ್ನು ಮುಂದುವರಿಸತಕ್ಕದ್ದು ಎಂಬ ಷರತ್ತಿಗೆ ಒಳಪಟ್ಟು, ಅನುಕ್ರಮವಾಗಿ ಭಾರತೀಯ ಶಾಲಾ ಪ್ರಮಾಣಪತ್ರ ಪರೀಕ್ಷಾ ಪರಿಷತ್ತು ಅಥವಾ ಪ್ರೌಢ ಶಿಕ್ಷಣದ ಕೇಂದ್ರ ಮಂಡಲಿಯೊಂದಿಗೆ ಸಂಯೋಜಿತವಾದ ಅಥವಾ ಅದರಿಂದ ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಗಳು."

**3. 2ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 2ನೇ ಪ್ರಕರಣದಲ್ಲಿ (11)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(11ಎ) "ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರ" ಎಂದರೆ, ನಿಯಮಗಳ ಮೂಲಕ ನಿಯಮಿಸಬಹುದಾದಂತೆ ರಚನೆ, ಪಾತ್ರ, ಪ್ರಕಾರ್ಯಗಳು ಮತ್ತು ಅಧಿಕಾರಗಳೊಂದಿಗೆ ಜಿಲ್ಲೆಯ ಜಿಲ್ಲಾಧಿಕಾರಿಯ ಅಧ್ಯಕ್ಷತೆಯಡಿಯಲ್ಲಿ ರಚನೆಯಾದ ಒಂದು ಪ್ರಾಧಿಕಾರ."

**4. 5ಎ ಹೊಸ ಪ್ರಕರಣದ ಸೇರ್ಪಡೆ.–** ಮೂಲ ಅಧಿನಿಯಮದ 5ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**5ಎ. ವಿದ್ಯಾರ್ಥಿಗಳ ರಕ್ಷಣೆ ಮತ್ತು ಭದ್ರತೆ.–** ಪ್ರತಿಯೊಂದು ಶೈಕ್ಷಣಿಕ ಸಂಸ್ಥೆ ಮತ್ತು ಅಂಥ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಯು, ಲೈಂಗಿಕ ಅಪರಾಧಗಳಿಂದ ರಕ್ಷಿಸುವುದನ್ನು ಒಳಗೊಂಡಂತೆ ವಿದ್ಯಾರ್ಥಿಗಳ ರಕ್ಷಣೆ ಮತ್ತು ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಅಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು."

**5. 112ಎ ಹೊಸ ಪ್ರಕರಣದ ಸೇರ್ಪಡೆ.–** ಮೂಲ ಅಧಿನಿಯಮದ XVII ನೇ ಅಧ್ಯಾಯದ ಶೀರ್ಷಿಕೆಯ ತರುವಾಯ 113ನೇ ಪ್ರಕರಣಕ್ಕಿಂತ ಮೊದಲು ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**112ಎ. 5ಎ ಪ್ರಕರಣದ ಉಲ್ಲಂಘನೆಗಾಗಿ ದಂಡ.–** (1) 5ಎ ಪ್ರಕರಣವನ್ನು ಉಲ್ಲಂಘಿಸುವ ಶೈಕ್ಷಣಿಕ ಸಂಸ್ಥೆಯ ವ್ಯವಸ್ಥಾಪನೆಯ ಯಾವೊಬ್ಬ ಸಿಬ್ಬಂದಿ ಅಥವಾ ಸದಸ್ಯನು ಅಪರಾಧ ನಿರ್ಣಯವಾದ ಮೇಲೆ ಕನಿಷ್ಠ ಆರು ತಿಂಗಳ ಕಾರಾವಾಸದೊಂದಿಗೆ ಮತ್ತು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

(2) ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರವು, ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ವಿಚಾರಣೆಯನ್ನು ನಡೆಸಿದಾಗ ಯಾವುದೇ ಶೈಕ್ಷಣಿಕ ಸಂಸ್ಥೆಯು 5ಎ ಪ್ರಕರಣದ ಉಲ್ಲಂಘನೆ ಮಾಡಿರುವುದು ಕಂಡುಬಂದಾಗಲೆಲ್ಲ, ಹತ್ತು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ದಂಡವನ್ನು ವಿಧಿಸತಕ್ಕದ್ದು.

(3) ಅಂಥ ವಿಚಾರಣೆಯ ತರುವಾಯ, ಯಾವುದೇ ಶೈಕ್ಷಣಿಕ ಸಂಸ್ಥೆಯು 5ಎ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದೆ ಎಂದು ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರಕ್ಕೆ ಕಂಡು ಬಂದಲ್ಲಿ, ಅಂಥ ಸಂಸ್ಥೆಯ ಮಾನ್ಯತೆ ಅಥವಾ ಸಂಯೋಜನೆಯನ್ನು ಹಿಂಪಡೆಯಲೂ ಸಹ ಸಕ್ಷಮ ಪ್ರಾಧಿಕಾರಕ್ಕೆ ಅಥವಾ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಬಹುದು."

**6. 124ಎ ಹೊಸ ಪ್ರಕರಣದ ಸೇರ್ಪಡೆ.–** ಮೂಲ ಅಧಿನಿಯಮದ 124ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**124ಎ. 48ನೇ ಪ್ರಕರಣದ ಉಲ್ಲಂಘನೆಗಾಗಿ ದಂಡ.**– ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರವು, ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ನಡೆಸಿದ ವಿಚಾರಣೆಯಲ್ಲಿ ಯಾವುದೇ ಶೈಕ್ಷಣಿಕ ಸಂಸ್ಥೆಯು 48ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ತಪ್ಪಿತಸ್ಥವಾಗಿದೆ ಎಂದು ಕಂಡುಬಂದಲ್ಲಿ, ಹತ್ತು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ದಂಡವನ್ನು ವಿಧಿಸತಕ್ಕದ್ದು ಮತ್ತು ಸಂಸ್ಥೆಯು 48ನೇ ಪ್ರಕರಣದ ಅಡಿಯಲ್ಲಿ ನಿಯಮಿಸಲಾದ ಮೊತ್ತಕ್ಕಿಂತ ಹೆಚ್ಚಾಗಿ ಹಾಗೆ ಸಂಗ್ರಹಿಸಿದ ಮೊತ್ತವನ್ನು ಮರುಪಾವತಿಸುವಂತೆ ಕೂಡಾ ನಿರ್ದೇಶಿಸಬಹುದು."

**7. 125ಎ ಹೊಸ ಪ್ರಕರಣದ ಸೇರ್ಪಡೆ.**– ಮೂಲ ಅಧಿನಿಯಮದ 125ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**125ಎ. 88, 89 ಮತ್ತು 90ನೇ ಪ್ರಕರಣದ ಉಲ್ಲಂಘನೆಗಾಗಿ ದಂಡ.**– ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರವು, ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ನಡೆಸಿದ ವಿಚಾರಣೆಯಲ್ಲಿ ಯಾವುದೇ ಶೈಕ್ಷಣಿಕ ಸಂಸ್ಥೆಯು 88, 89 ಮತ್ತು 90ನೇ ಪ್ರಕರಣಗಳನ್ನು ಉಲ್ಲಂಘಿಸಿ ತಪ್ಪಿತಸ್ಥವಾಗಿದೆ ಎಂದು ಕಂಡುಬಂದಲ್ಲಿ, ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡವನ್ನು ವಿಧಿಸತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಶಿಕ್ಷಣ ಅಧಿನಿಯಮ, 1983ನ್ನು (1995ರ ಕರ್ನಾಟಕ ಅಧಿನಿಯಮ 1) ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ, ಎಂದರೆ:-

(1) ಭಾರತೀಯ ಶಾಲಾ ಪ್ರಮಾಣಪತ್ರ ಪರೀಕ್ಷಾ ಪರಿಷತ್ತು ಅಥವಾ ಪ್ರೌಢ ಶಿಕ್ಷಣದ ಕೇಂದ್ರ ಮಂಡಳಿಯೊಂದಿಗೆ ಸಂಯೋಜಿತವಾದ ಅಥವಾ ಅದರಿಂದ ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಗಳನ್ನು, ಈ ಅಧಿನಿಯಮದ 5ಎ, 48, 112ಎ ಮತ್ತು 124ಎ ಉಪಬಂಧಗಳು ಈ ಸಂಸ್ಥೆಗಳಿಗೆ ಅನ್ವಯವಾಗುವುದು ಮುಂದುವರೆಯುವುದಕ್ಕೆ ಒಳಪಟ್ಟು ವಿನಾಯಿತಿಸುವುದು;

(2) ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರವನ್ನು ಪರಿಭಾಷಿಸುವುದು;

(3) ಲೈಂಗಿಕ ಅಪರಾಧಗಳಿಂದ ರಕ್ಷಿಸುವುದು ಒಳಗೊಂಡಂತೆ ವಿದ್ಯಾರ್ಥಿಗಳ ರಕ್ಷಣೆ ಮತ್ತು ಭದ್ರತೆಯನ್ನು ಪ್ರತಿಯೊಂದು ಶಿಕ್ಷಣ ಸಂಸ್ಥೆ ಮತ್ತು ಸಿಬ್ಬಂದಿಯು ಖಚಿತಪಡಿಸಿಕೊಳ್ಳುವುದಕ್ಕೆ ಉಪಬಂಧಗಳನ್ನು ಕಲ್ಪಿಸುವುದು;

(4) 5ಎ, 48, 88, 89 ಮತ್ತು 90ನೇ ಪ್ರಕರಣಗಳ ಉಪಬಂಧಗಳ ಉಲ್ಲಂಘನೆಗಾಗಿ ದಂಡವನ್ನು ವಿಧಿಸುವುದು;

(5) ಕೆಲವು ಇತರ ಪ್ರಾಸಂಗಿಕ ತಿದ್ದುಪಡಿಗಳನ್ನು ಸಹಾ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಳ್ಳುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತ ಜ್ಞಾಪನ ಪತ್ರ

| | |
|---|---|
| **ಖಂಡ 3:** | 3ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಲಾದ 2ನೇ ಪ್ರಕರಣದ (11ಎ) ಖಂಡವು ಜಿಲ್ಲಾ ಶಿಕ್ಷಣ ಪ್ರಾಧಿಕಾರದ ರಚನೆ, ಪಾತ್ರ, ಪ್ರಕಾರ್ಯಗಳು ಮತ್ತು ಅಧಿಕಾರಗಳನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ. |
| **ಖಂಡ 4:** | 4ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಲಾದ 5ಎ ಪ್ರಕರಣವು, ಲೈಂಗಿಕ ಅಪರಾಧಗಳಿಂದ ರಕ್ಷಣೆಯನ್ನೂ ಒಳಗೊಂಡಂತೆ ವಿದ್ಯಾರ್ಥಿಗಳ ರಕ್ಷಣೆ ಮತ್ತು ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಶೈಕ್ಷಣಿಕ ಸಂಸ್ಥೆಗಳು ಮತ್ತು ಅದರ ಸಿಬ್ಬಂದಿಯು ಕೈಗೊಳ್ಳಬೇಕಾದ ವಿಧಾನ ಮತ್ತು ಕ್ರಮಗಳನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ತನ್ವೀರ್ ಸೇಠ್**
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

# ಅನುಬಂಧ

**ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ (1995ರ ಕರ್ನಾಟಕ ಅಧಿನಿಯಮ 1) ಉದ್ಧೃತ ಭಾಗ**

XX XX XX

**1. ಚಿಕ್ಕ ಹೆಸರು, ವ್ಯಾಪ್ತಿ, ಅನ್ವಯ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಶಿಕ್ಷಣ ಅಧಿನಿಯಮ, 1983 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೆಳಕಂಡವುಗಳನ್ನು ಹೊರತುಪಡಿಸಿ ರಾಜ್ಯದಲ್ಲಿರುವ ಎಲ್ಲ ಶಿಕ್ಷಣ ಸಂಸ್ಥೆಗಳಿಗೆ ಮತ್ತು ಟ್ಯುಟೋರಿಯಲ್ ಸಂಸ್ಥೆಗಳಿಗೆ ಅನ್ವಯವಾಗತಕ್ಕುದು:-

XX XX XX

(iiiಎ) ಅನುಕ್ರಮವಾಗಿ ಭಾರತೀಯ ಶಾಲಾ ಪ್ರಮಾಣಪತ್ರ ಪರೀಕ್ಷಾ ಪರಿಷತ್ತು ಅಥವಾ ಪ್ರೌಢ ಶಿಕ್ಷಣದ ಕೇಂದ್ರ ಮಂಡಲಿಯೊಂದಿಗೆ ಸಂಯೋಜಿತವಾದ ಅಥವಾ ಅದರಿಂದ ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಗಳು;

**2. ಪರಿಭಾಷೆಗಳು.–** XX XX XX

(11) "ಜಿಲ್ಲಾ ಶಿಕ್ಷಣ ಅಧಿಕಾರಿ" ಎಂದರೆ, ಜಿಲ್ಲೆಯಲ್ಲಿ ಅಥವಾ ಜಿಲ್ಲೆಯ ಭಾಗದಲ್ಲಿ ಪ್ರಾಥಮಿಕ ಶಿಕ್ಷಣದ ಆಡಳಿತ ನಿರ್ವಹಣೆಗೆ ಅಂಥ ಅಧಿಕಾರಿಯಾಗಿ ನೇಮಿಸಲಾದಂಥ ಅಧಿಕಾರಿ;

XX XX XX

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಪಿ7, ಕಾಸೂ , 1195–ಪ್ರತಿಗಳು 1000, 25ನೇ ಮಾರ್ಚ್, 2017

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**THIRTEENTH SESSION**
**(Adjourned Meetings)**

# THE KARNATAKA EDUCATION (SECOND AMENDMENT) BILL, 2017

**(L.A. Bill No. 18 of 2017)**

A Bill further to amend the Karnataka Education Act, 1983.

Whereas it is expedient further to amend the Karnataka Education Act, 1983 (Karnataka Act 1 of 1995) for the purposes hereinafter appearing;

Be it enacted by the Karnataka State Legislature in the sixty eighth year of the Republic of India, as follows:-

**1. Short title and commencement**.- (1) This Act may be called the Karnataka Education (Second Amendment) Act, 2017.

(2) It shall come into force at once.

**2. Amendment of section 1**.- In the Karnataka Education Act, 1983 (Karnataka Act 1 of 1995) (hereafter referred to as the principal Act), in section 1, in sub-section (3), for clause (iiia), the following shall be substituted, namely:-

"(iiia) Educational Institutions affiliated to or recognized by the Council of Indian School Certificate Examination or Central Board of Secondary Education respectively but subject to condition that the provisions of section 5A, 48, 112A and 124A of this Act shall continue to apply to these institutions."

**3. Amendment of section 2.-** In section 2 of the principal Act, after clause (11), the following shall be inserted, namely:-

"(11A) "District Education Regulatory Authority" means an authority constituted under the Chairmanship of the Deputy Commissioner of a district with composition, role, functions and powers as may be prescribed by rules."

**4. Insertion of new section 5A.-** After section 5 of the principal Act, the following shall be inserted, namely:-

**"5A. Safety and security of students.-** Every educational institution and an employee of such educational institutions shall take such measures to ensure

safety and security of students including protection from sexual offences, in the manner as may be prescribed."

**5. Insertion of new section 112A.-** After the heading of Chapter XVII of the principal Act, before section 113, the following shall be inserted, namely:-

"**112A. Penalty for contravention of section 5A.-** (1) Any employee or member of the management of an educational institution who contravenes section 5A shall on conviction, be punished with imprisonment for a minimum term of six months and with a fine which may extend to one lakh rupees.

(2) Whenever any educational institution is found to be in contravention of section 5A in an enquiry conducted, after giving an opportunity of being heard, by the District Education Regulatory Authority, it shall impose a penalty which may extend to ten lakh rupees.

(3) The District Education Regulatory Authority after such enquiry has found that any educational institution has contravened the provisions of section 5A shall also recommend to the competent authority or concerned authority for withdrawal of recognition or affiliation to such institution."

**6. Insertion of new section 124A.-** After section 124 of the principal Act, the following shall be inserted, namely:-

"**124A. Penalty for contravention of section 48.-** Any educational institution is found guilty of contravention of provisions of section 48 in an enquiry conducted, after providing an opportunity of being heard, by the District Education Regulatory Authority, it shall impose a penalty which may extend to ten lakh rupees and also direct for refund of amount so collected by the institution in excess of the amount prescribed under section 48.

**7. Insertion of new section 125A.-** After section 125 of the principal Act, the following shall be inserted, namely:-

"**125A. Penalty for contravention of section 88, 89 and 90.-** Any educational institution is found guilty of contravention of either of sections 88, 89 and 90 in an enquiry conducted, after giving an opportunity of being heard, by District Education Regulatory Authority, it shall impose a penalty which may extend to five lakh rupees."

## STATEMENT OF OBJECTS AND REASONS

It is considered necessary further to amend the Karnataka Education Act, 1983 (Karnataka Act 01 of 1995) to,-

(1) exempt Educational Institutions affiliated to or recognized by the Council of Indian School Certificate Examination or Central Board of Secondary Education, subject to condition that the provisions of section 5A, 48, 112A and 124A of this Act shall continue to apply to these institutions;

(2) define District Education Regulatory Authority;

(3) make provisions to ensure safety and security of students including protection from sexual offences, by the every Education Institution and employee;

(4) provide penalty for contravention of the provisions of sections 5A, 48, 88, 89 and 90;

(5) certain consequential amendments are also proposed.

Hence, the Bill.

**FINANCIAL MEMORANDUM**

There is no extra expenditure involved in the proposed Legislative measure.

## MEMORANDUM REGARDING DELEGATED LEGISLATION

**Clause 3:** Clause (11A) of section 2 proposed to be inserted by clause 3 empowers the State Government to prescribe by rules the composition, role, functions and powers of the District Education Authority.

**Clause 4:** Section 5A proposed to be inserted by clause 4 empowers the State Government to prescribe the manner and measures to be taken by the educational institutions and its employees to ensure safety and security of students including protection from sexual offences.

The proposed delegation of Legislative power is normal in character.

**TANVEER SAIT**
Minister for Primary and
Secondary Education

**S. Murthy**
Secretary (I/C)
Karnataka Legislative Assembly

## ANNEXURE
## EXTRACT FROM THE KARNATAKA EDUCATION ACT, 1983
## (KARNATAKA ACT 1 OF 1995)

XXX XXX XXX

**1. Short title, extent, application and commencement.-** (1) This Act may be called the Karnataka Education Act, 1983.

(2) It extends to the whole of the State of Karnataka.

(3) It applies to all educational institutions and tutorial institutions in the State except,-

XXX XXX XXX

(iiia) Educational Institutions affiliated to or recognised by the Council of Indian School Certificate Examination or Central Board of Secondary Education respectively.

XXX XXX XXX

**2. Definitions.-** In this Act, unless the context otherwise requires,-

XXX XXX XXX

(11) "District Education Officer" means an Officer appointed as such to be incharge of the administration of the primary education in a district or part of a district;

XXX XXX XXX

Government Press, Vikasa Soudha Unit, Bengaluru 25th March, 2017 P7, W.D.1195, Copies 1000